148th, ಕ್ರ.ಸಂ. 32.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ**

**ವಿಷಯ:** ವಿದ್ಯುತ್ ಬೆಲೆ ಏರಿಕೆಯ ಹೊರೆಯನ್ನು ಸಾರ್ವಜನಿಕರ ಮೇಲೆ ಹೊರೆಸಬಾರದಾಗಿ ಮಾನ್ಯ ಇಂಧನ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸಿರುವ ಬಗ್ಗೆ.

* * * * *

ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರವನ್ನು ಪರಿಷ್ಕರಿಸುವುದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ (ಕವಿನಿ) ಆಯೋಗದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ವಿದ್ಯುಚ್ಛಕ್ತಿ ಕಾಯ್ದೆ 2003 ರ Sec 61 & 62 ರಂತೆ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಕಾಯ್ದೆ 1999 ರ Sec 27 ರಂತೆ ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿ (ವಿಸಕಂಪನಿ)ಗಳು ಕವಿನಿ ಆಯೋಗಕ್ಕೆ ಸಲ್ಲಿಸುವ ವಾರ್ಷಿಕ ವಿದ್ಯುತ್ ದರ ಪರಿಷ್ಕರಣೆ ಪ್ರಸ್ತಾವನೆಯ ಅರ್ಜಿಯನ್ನು ಕವಿನಿ ಆಯೋಗವು ಪರಮರ್ಶಿಸಿ, ಸಾರ್ವಜನಿಕರ ಅಹವಾಲುಗಳನ್ನು ಪರಿಗಣಿಸಿ ಪ್ರತಿ ವರ್ಷ ವಿದ್ಯುತ್ ದರ ಪರಿಷ್ಕರಣೆ ಆದೇಶವನ್ನು ಹೊರಡಿಸುವುದಾಗಿದೆ.

ಅದರಂತೆ, ವಿದ್ಯುಚ್ಛಕ್ತಿ ಕಾಯ್ದೆ 2003 ರ ಪ್ರಕಾರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನ (Annual Performance Review) ಮತ್ತು ವಾರ್ಷಿಕ ಕಾರ್ಯನಿರ್ವಹಣಾ ವೆಚ್ಚಗಳ (Annual Performance Requirement) (ವಿದ್ಯುತ್ ಖರೀದಿ ವೆಚ್ಚ, ಸರಬರಾಜು ವೆಚ್ಚ ಸಹಾಯಧನ, ನೌಕರರ ವೇತನದ ವೆಚ್ಚ ಹಾಗೂ ಇತರ ವೆಚ್ಚಗಳನ್ನೊಳಗೊಂಡಂತೆ) ಅವಶ್ಯಕತೆಯಲ್ಲಿ ಉಂಟಾಗುವ ಹಾಲಿ ಕಂದಾಯ ಕೊರತೆಯನ್ನು ಸರಿದೂಗಿಸುವ ಸಂಬಂಧ ಕವಿನಿ ಆಯೋಗಕ್ಕೆ ವಿದ್ಯುತ್ ದರ ಪರಿಷ್ಕರಣೆಗೆ ಅರ್ಜಿಗಳನ್ನು ವಿಸಕಂಪನಿಗಳು ಸಲ್ಲಿಸುವುದು ಅನಿವಾರ್ಯವಾಗಿರುತ್ತದೆ.

ಆದ್ದರಿಂದ, ವಿಸಕಂಪನಿಗಳಿಗೆ 2023-24ನೇ ಸಾಲಿಗೆ ಕಾರ್ಯಕಾರಿ ನಿರ್ವಹಣಾ ವೆಚ್ಚಗಳಿಗೆ ಕೊರತೆಯಾಗಿರುವ ಕಂದಾಯವನ್ನು ಸರಿದೂಗಿಸುವುದು ಅವಶ್ಯವಿರುವುದರಿಂದ ವಿದ್ಯುತ್ ದರ ಪರಿಷ್ಕರಣೆ ಅನಿವಾರ್ಯವಾಗಿದೆ.

ಸಂಖ್ಯೆ: ಎನರ್ಜಿ 286 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು